## ವಾಲ್ಡ್ರಾವಾಗ್ಲಿಯಾದ ಸಂಚಾರಿ ಕಥೆಗಾರರು

ನನ್ನ ಕಲ್ಪನೆ ಮತ್ತು ವಾಸ್ತವದಲ್ಲಿ ಸಂಗತಿಗಳನ್ನು ಹಾಗೂ ಪಾತ್ರಗಳನ್ನು ನಿಭಾಯಿಸುವಲ್ಲಿ, ನಿರ್ಣಯಿಸುವಲ್ಲಿ ತಮ್ಮ ಭಾಷೆ ಹಾಗೂ ಕಲ್ಪನೆಗಳ ಮುಖೇನ ನನ್ನ ಮೇಲೆ ಅಳಿಸಲಾರದ ಪ್ರಭಾವ ಬೀರಿದವರು ಈ ವಾಲ್ಡ್ರಾವಾಗ್ಲಿಯಾದ ಕಥೆಗಾರರು. ನನಗೆ ಕಥೆ ಹೇಳುವುದನ್ನು ಕಲಿಸಿದ ಮೊದಲ ಗುರು ನನ್ನ ಅಜ್ಜ ಬ್ರಿಸ್ಟಿನ್ ಅನ್ನುವುದರಲ್ಲಿ ಯಾವ ಅನುಮಾನವೂ ಇಲ್ಲ. ಆದರೂ ನಾನು ಈ ಕಥೆಗಾರರಿಂದ ತುಂಬಾ ಕಲಿತಿದ್ದೇನೆ. ಇವರ ವೈವಿಧ್ಯಮಯ ತಂತ್ರಗಳನ್ನು ಹಾಗೂ ಸಂಭಾಷಣಾ ಸ್ವರೂಪಗಳನ್ನು ಹತ್ತಿರದಿಂದ ನೋಡುವ ಹಾಗೂ ಅಭ್ಯಸಿಸುವ ಅವಕಾಶ ನನಗೆ ಒದಗಿ ಬಂದಿತ್ತು. ಕೇವಲ ಮಾತನಾಡುವ ಒಂದು ಪ್ರಾಂತ ಭಾಷೆಗೂ ಹಾಗೂ ಅದೇ ಪ್ರಾಂತದ ದೇಸೀ ನುಡಿಗಟ್ಟುಗಳ ಮೂಲ ಭಾಷೆಗೂ ಇರುವ ವ್ಯತ್ಯಾಸವನ್ನು ನಾನು ಕೇಳಿದ್ದು ಮತ್ತು ಕಲಿತದ್ದು ಇವರ ಸಹವಾಸದಲ್ಲಿ ಅಥವಾ ಇವರ ಸ್ಕೂಲಿನಲ್ಲೇ. ವಾಲ್ಡ್ರಾವಾಗ್ಲಿಯಾದ ಕಥೆಗಾರರ ವಿಶಿಷ್ಟತೆ ಇದ್ದದ್ದು ಅವರ ನಿರೂಪಣಾ ಶೈಲಿಯಲ್ಲಿ. ಅಂತೆಯೇ ಅವರು ಆ ಕ್ಷಣದ ತುರ್ತಿನೊಂದಿಗೆ ಇಲ್ಲಾ ಅಲ್ಲಿನ ಯಾವುದೋ ಘಟನೆಯೊಂದನ್ನು ಥಳುಕಾಕಿಕೊಂಡು ಕಥೆಯನ್ನು ಬೆಳೆಸುತ್ತಿದ್ದ ರೀತಿಯಲ್ಲಿ. ಕೆಲವೊಮ್ಮೆ ಅದರ ಸಫಲತೆ ಆಯಾ ಕಥೆಗಾರರ ಸಾಮರ್ಥ್ಯದ ಮೇಲೆ ನಿಂತಿರುತ್ತಿತ್ತು. ಹಾಗಾಗಿಯೇ ಒಂದೇ ಕಥೆ ವಿವಿಧ ಕಥೆಗಾರರ ಬಾಯಲ್ಲಿ ವಿವಿಧ ರೀತಿಯಲ್ಲಿ ಅನಾವರಣಗೊಳ್ಳುತ್ತಿತ್ತು ಅಥವಾ ಪುನರಾವರ್ತಿತಗೊಳ್ಳುತ್ತಿತ್ತು. ಅದೇರೀತಿ, ಆ ಕಥೆಗಾರರು ತಮ್ಮ ಕೇಳುಗರ ಮನಃಸ್ಥಿತಿ ಹಾಗೂ ಭಾವನೆಗಳ ಮೇಲೆ ಯಾವ ಕಾರಣಕ್ಕೂ ಉದಾಸೀನರಾಗಿ ಇರುತ್ತಿರಲಿಲ್ಲ.

ಆದರೆ, ಇವರಲ್ಲೆಲ್ಲಾ ರ್‍ಯಾವನೆಲ್ ಅನ್ನುವವನು ಒಬ್ಬ ಅಪ್ರತಿಮ ಕಥೆಗಾರನಾಗಿದ್ದ. ಅವನು ಹೇಳುತ್ತಿದ್ದ ಕಥೆಗಳು ಬಹತೇಕ ತುಂಬಾ ಇತ್ತೀಚೆಗೆ ನಡೆದ, ಆದರೆ ಜನರ ಮನಸ್ಸಿನಿಂದ ಇನ್ನೂ ಮರೆಯಾಗಿರದಿದ್ದ ನಿಜ ಘಟನೆಯೊಂದರ ನಾಟಕೀಕರಣಗಳಾಗಿರುತ್ತಿದ್ದವು. ಕಥೆಯೊಂದನ್ನು ಬೆಳೆಸುವ ಈ ವಿಧಾನ ಮತ್ತು ತಂತ್ರಗಳನ್ನು ಕಥಾವಸ್ತುಗಳು ಅವಲ್ಲದಿದ್ದರೂ, ಅದೇರೀತಿಯ ಸಂದರ್ಭಗಳನ್ನು, ಎಲ್ಲಕ್ಕಿಂತ ಮಿಗಿಲಾಗಿ ಅದೇರೀತಿಯ ವಾತಾವರಣವನ್ನು ನಾನು ರಂಗದ ಮೇಲೆ ಪ್ರಯೋಗ ಮಾಡಿದ್ದೇನೆ. ನಾನು ನಿಜಕ್ಕೂ ನನ್ನ ಬಗ್ಗೆ ಕಲ್ಪಿಸಿಕೊಳ್ಳುವ ಪ್ರಯತ್ನ ಮಾಡಿಲ್ಲ, ಅಂತೆಯೇ ಜನರನ್ನೂ ಹಾಗೆ ಮಾಡುವುದಿಲ್ಲ. ನಾನು ನನ್ನ ಹುಟ್ಟೂರಿನ ಆ ರಸ್ತೆಗಳಲ್ಲಿ, ಲೋಂಬಾರ್ಡ್‌ರ್ನ ನದಿಗಳ ತಡಿಯಲ್ಲಿ, ನನ್ನಿಷ್ಟದ ಕಾಡುಗಳಲ್ಲಿ, ಪರ್ವತಗಳಲ್ಲಿ, ಅಲ್ಲಿ ಹರಿಯುವ ನೀರಿನ ಜುಳು ಜುಳು ಸದ್ದಿನಲ್ಲಿ ನಾನು ಕೇಳಿಸಿಕೊಂಡ ಕಥೆಗಳಲ್ಲಿ ನಾನು ದೃಢವಾಗಿ ಬೇರೂರಿದ್ದೇನೆ. ಇವೆಲ್ಲವೂ ಪರಿಪೂರ್ಣವಾಗಿ ನನ್ನಿಂದ ಅಭಿವ್ಯಕ್ತಿಗೊಳ್ಳದೇ ಇರಬಹುದು, ಆದರೆ ನನ್ನ ರೂಪಕಗಳ ಲೋಕವಿರುವುದೇ ಅಲ್ಲಿ. ನಾನು ಹುಟ್ಟಿದ ಆ ಸರೋವರಗಳಿಂದ, ಆ ಕಣಿವೆಗಳಿಂದ, ಆ ನದಿಗಳಿಂದ ಯಾವತ್ತೂ ದೂರಾಗುವುದೇ ಇಲ್ಲ.

**ಎಸ್. ಗಂಗಾಧರಯ್ಯ**

ಕತೆಗಾರ ಮತ್ತು ಅನುವಾದಕ ಗಂಗಾಧರಯ್ಯ ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಮಾಕುವಳ್ಳಿಯವರು. ಅದೇ ತಾಲ್ಲೂಕಿನ ಮತಿಘಟ್ಟದ ಜಯಭಾರತಿ ಪದವಿ ಪೂರ್ವ ಕಾಲೇಜಿನಲ್ಲಿ ಪ್ರಾಚಾರ್ಯರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. 'ನವಿಲ ನೆಲ', 'ಒಂದು ಉದ್ದನೆಯ ನೆರಳು', 'ದೇವರ ಕುದುರೆ' ಅವರ ಪ್ರಕಟಿತ ಕಥಾಸಂಗ್ರಹಗಳು. ಅನೇಕ ಕೃತಿಗಳನ್ನು ಇಂಗ್ಲಿಷ್‌ನಿಂದ ಕನ್ನಡಕ್ಕೆ ಅನುವಾದಿಸಿದ್ದಾರೆ. ಪ್ರಸ್ತುತ ತಿಪಟೂರಿನಲ್ಲಿ ವಾಸ.